# 'ಕೃಷಿ ನೀತಿ ಬದಲಾವಣೆ ಅವಶ್ಯ'

**ಧಾರವಾಡ:** "ರಾಜ್ಯ ಹಾಗೂ ರಾಷ್ಟ್ರದ ಕೃಷಿ ನೀತಿಗಳಲ್ಲಿ ಬದಲಾವಣೆ ತರುವುದು ಅವಶ್ಯವಿದ್ದು, ಈ ನಿಟ್ಟಿನಲ್ಲಿ ರೈತರ ಅಭಿಪ್ರಾಯ ಸಂಗ್ರಹಿಸಿ ಸರ್ಕಾರಗಳಿಗೆ ಸಲ್ಲಿಸಲು ಪ್ರಜಾತೀರ್ಪು ಎಂಬ ವಿಶಿಷ್ಟ ಕಾರ್ಯಕ್ರಮವನ್ನು ರಾಜ್ಯದಲ್ಲಿ ಡಿಸೆಂಬರ್ ಮೊದಲನೇ ವಾರದಲ್ಲಿ ಹಮ್ಮಿಕೊಳ್ಳಲಾಗುವುದು" ಎಂದು ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ (ಡಿಡಿಎಸ್) ನಿರ್ದೇಶಕ ಪಿ.ವಿ.ಸತೀಶ ಹೇಳಿದರು.


'ಪ್ರಜಾತೀರ್ಪು ಕಾರ್ಯಕ್ರಮದಲ್ಲಿ ರೈತರೇ ತೀರ್ಪು ನೀಡಲಿದ್ದಾರೆ. ಕೃಷಿ ಸಂಶೋಧಕರು, ಅಧಿಕಾರಿಗಳು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಈ ತೀರ್ಪಿನಿಂದ ಬರುವ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ಈ ತೀರ್ಪುಗಳಿಗೆ ಪೂರಕವಾಗುವಂತೆ ಕೃಷಿ ನೀತಿ ಜಾರಿಗೆ ತರಲು ಒತ್ತಾಯಿಸಲಾಗುವುದು' ಎಂದು ಸೋಮವಾರ ಮಾಧ್ಯಮ ಸಂವಾದದಲ್ಲಿ ಅವರು ತಿಳಿಸಿದರು.

ರಾಷ್ಟ್ರದ ಕೃಷಿ ಸಂಶೋಧನಾ ವಲಯ ಬಹುರಾಷ್ಟ್ರೀಯ ಕಂಪೆನಿಗಳಿಂದ ನಿರ್ದೇಶಿಸಲ್ಪಡುತ್ತಿದೆ. ಇದರಿಂದಾಗಿ ಕೃಷಿ ಸಂಶೋಧನೆಗಳು ಜೈವಿಕ ತಂತ್ರಜ್ಞಾನ ಮತ್ತು ಕುಲಾಂತರಿ ತಂತ್ರಜ್ಞಾನದತ್ತ ವಾಲತೊಡಗಿವೆ. ಹಸಿರು ಕ್ರಾಂತಿಯಿಂದ ಭಾರತೀಯ ಕೃಷಿ ರಂಗದ ಮೇಲಾಗಿರುವ ವ್ಯತಿರಿಕ್ತ ಪರಿಣಾಮಗಳ ಹೊಣೆ ಹೊತ್ತುಕೊಳ್ಳಲು ಸಂಶೋಧನಾ ರಂಗ ನಿರಾಕರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣದ ಬಗ್ಗೆ ಜಗತ್ತಿನ ವಿವಿಧೆಡೆ ಚಿಂತನೆಗಳು ಶುರುವಾಗಿವೆ ಎಂದರು.

ರೈತರ ಅನುಭವ, ಅವರಲ್ಲಿರುವ ವಿಶೇಷ ಜ್ಞಾನ, ಅನುಶೋಧನೆಗಳು ಮುಂಚೂಣಿಗೆ ಬರಬೇಕು. ಕೃಷಿ ಸಂಶೋಧನಾ ವ್ಯವಸ್ಥೆ ಹೆಚ್ಚು ಪಾರದರ್ಶಕವಾಗಿರಬೇಕು. ಧ್ವನಿವಂಚಿತರ, ಸಣ್ಣ ಹಾಗೂ ಮಧ್ಯಮ ರೈತರ ಅಗತ್ಯ ಮತ್ತು ಆಶೋತ್ತರಗಳಿಗೆ ಸಂಶೋಧನಾ ರಂಗ ಸ್ಪಂದಿಸಬೇಕು. ಈ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಐಎಎಸ್‌ಟಿಡಿ (ಇಂಟರ್‌ನ್ಯಾಶನಲ್ ಅಸೆಸ್‌ಮೆಂಟ್ ಆಫ್ ಅಗ್ರಿಕಲ್ಚರಲ್ ನಾಲೆಡ್ಜ್, ಸಾಯನ್ಸ ಆ್ಯಂಡ್ ಟೆಕ್ನಾಲಜಿ ಫಾರ್ ಡೆವಲಪ್‌ಮೆಂಟ್) ಎಂಬ ವೇದಿಕೆ ರೂಪುಗೊಂಡಿದೆ ಎಂದು ತಿಳಿಸಿದರು.

ದಕ್ಷಿಣ ಏಷ್ಯಾಕ್ಕೆ ಸಂಬಂಧಿಸಿ ಡಿಡಿಎಸ್ ನೇತೃತ್ವದಲ್ಲಿ ಆದರ್ಶ ಎಂಬ ಕೂಟ ರಚನೆಯಾಗಿದೆ. ಈ ಕೂಟದ ನೇತೃತ್ವದಲ್ಲಿ ಪ್ರಜಾತೀರ್ಪು ಕಾರ್ಯಕ್ರಮ ನಡೆಯಲಿದೆ. ರಾಜ್ಯದ ಹಲವು ಹಿರಿಯ ವ್ಯಕ್ತಿಗಳು ಹಾಗೂ ಸಮಾನ ಮನಸ್ಕ ಸಂಘಟನೆಗಳು ಈ ಕಾರ್ಯಕ್ರಮಕ್ಕೆ ಕೈಜೋಡಿಸಿವೆ ಎಂದರು.

ಕೃಷಿ ಮಾಧ್ಯಮ ಕೇಂದ್ರದ ಅಧ್ಯಕ್ಷೆ ಅನಿತಾ ಪೈಲೂರ, ಅಪ್ಪಿಕೋ ಚಳವಳಿಯ ನೇತಾರ ಪಾಂಡುರಂಗ ಹೆಗಡೆ ಮತ್ತಿತರರು ಉಪಸ್ಥಿತರಿದ್ದರು.



ಧಾರವಾಡದಲ್ಲಿ ಸೋಮವಾರ ನಡೆದ ಮಾಧ್ಯಮ ಸಂವಾದದಲ್ಲಿ ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ನಿರ್ದೇಶಕ ಪಿ.ವಿ. ಸತೀಶ ಮಾತನಾಡಿದರು. ಪಾಂಡುರಂಗ ಹೆಗಡೆ, ಅನಿತಾ ಪೈಲೂರ ಚಿತ್ರದಲ್ಲಿದ್ದಾರೆ.